ಮೈಸೂರ ಗೆಜೆಟ್.

ಸಂ. XXXI.] ಸರಕಾರದಿಂದ ಘಾಯಿಷ್ ಆದ್ದು [ನಂ. 2.

ಬೆಂಗಳೂರು, ಗುರುವಾರ, ಜನವರಿ ತಾ॥ 16, ಸ್ ೧೮೯೬.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕಸ್ ಆಫಿಸರ್‌ಗಳು, ಫಾರೆಸ್ಟ್ರು, ರೆಜಿಸ್ಟ್ರೇರ್ಷ ವ ಯಿಜ್ಯೂ ಕೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡ್ ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆರ್ಷ ಜಡ್ಜ್‌ರು, ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ರು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥತೀ ರಿಪೋರ್ಟುಗಳು; ಪೋಸ್ಟಾಫಿನ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಾಂಜೂರ್ ಆಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇರ್ಷಗಳು.—ಇಲ್ಲ.

4ನೇ ಭಾಗ—ಸರ್ಕಾರ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ರೆವಿನ್ಯೂ.

ತಾರೀಖು 10ನೇ ಡಿಸೆಂಬರ್ 1895.

ನಂ. 5364.—ಫೈ. 294.—ಗವರ್ಮೆಂಟಿನವರು ಅಜ್ಞಾಪಿಸುವದೇನಂದರೆ,—ಇದರಡಿ ಬರುವ ಜಾಸ್ತಿ ಅಂಶಗಳು ಮತ್ತು ಬದಲಾವಣೆಗಳು ಮೈಸೂರ್ ಸರ್ವಿಸ್ ರೆಗ್ಯುಲೇರ್ಷಗಳಲ್ಲಿ ದಾಖಲ್ ಮಾಡಲ್ಪಡತಕ್ಕದ್ದು.

1. 518ನೇ ಆರ್ಟಿಕಲ್‌ಗೆ ಬದಲಾಗಿ ಸೇರಿಸಲ್ಪಡತಕ್ಕದ್ದೇನಂದರೆ,—"ಆರ್ಟಿಕಲ್ 518 ಯಿ. ಕೌನ್ಸೆಲಿನ ಯಾವ ಮೆಂಬರಾದರೂ ರೈಲ್ ಮೇಲೆ 20 ಮೈಲಿಗಳಿಗೆ ಕಮ್ಮಿ ಯಿಲ್ಲದೆ ವಂದೇ ಪ್ರಯಾಣ ಮಾಡಬೇಕಾಗಿದ್ದು ಅಂಥಾ ಪ್ರಯಾಣದ ಆಬೈರಿನಲ್ಲಿ ಅವರ

ಉಪಯೋಗಕ್ಕೊಸ್ಕರವಾಗಿ ಬೇಕಾದ ವಾಹನ ಸಾಧನಗಳನ್ನು ಕಳುಹಿಸಿದಾಗ ಅವರಿಗೆ 525, ಯೆ. ಆರ್ಟಿಕಲ್ ಅನುಸರಿಸಿ ಸಲ್ಲಬೇಕಾದ ಸಾಧಾರಣ ಅಲೋನೆನ್ಸ್ ದೇಖೀಲ್ ಅಂಥಾ ವಾಹನ ಸಾಧನವಂದರೆ ಎಂದು ಗಾಡಿ ಯರಡು ಜೋಡಿ ಕುದರೆಗಳನ್ನು ಕಳುಹಿಸುವ ಬಗ್ಯಾಗಿ ತಗಲುವ ಕರಾರುವಾಕಾ ಲಾಗವಡು ಸುದಾ ಪಡಿಯುವ ಬಗ್ಯೆ ಅರ್ಜ ರಾಗಿರತಕ್ಕದ್ದು.

"518 ಬಿ. ಯಾವದಾದರೂ ವಬ್ಬ ಆಫಿಸರು, ಅವರ ಮೇಲ್‌ದರ್ಜೆ ಆಫಿಸರರ ಜನರಲ್ ಅಥವಾ ಸ್ಪೆಷಲ್ ಮಂಜೂರಾತಿಗೆ ವಳಪಟ್ಟು, ರೈಲ್ ಮಾರ್ಗವಾಗಿ 20 ಮೈಲಿಗಳಿಗೆ ಕಮ್ಮಿ ಇಲ್ಲದೆ ಎಂದೇ ಪ್ರಯಾಣ ಮಾಡಬೇಕಾಗಿದ್ದ ಅಂಥಾ ಪ್ರಯಾಣದ ಆಬ್ಯೆರಿನಲ್ಲಿ ಅವರ ಉಪಯೋಗಕ್ಕೊಸ್ಕರವಾಗಿ ಬೇಕಾದ ವಾಹನ ಸಾಧನಗಳನ್ನು ಕಳುಹಿಸಿದಾಗ ಅವರಿಗೆ 522ನೇ ಆರ್ಟಿಕಲ್ ಅನುಸರಿಸಿ ಸಲ್ಲಬೇಕಾದ ಸಾಧಾರಣ ಅಲೋನೆನ್ಸ್ ದೇಖೀಲ್ ಅಂಥಾ ವಾಹನ ಸಾಧನವನ್ನು ಕಳುಹಿಸುವ ಬಗ್ಯಾಗಿ ತಗಲುವ ಕರಾರುವಾಕಾ ಲಾಗವಡು ಸುದಾ ಪಡಿಯುವ ಬಗ್ಯೆ ಅರ್ಜ ರಾಗಿರತಕ್ಕದ್ದು.

ಈ ಸಬ್ ಆರ್ಟಿಕಲ್‌ನಲ್ಲಿ "ವಾಹನ ಸಾಧನ" ಅಂದರೆ—

(1) ಡಿಸ್ಟ್ರಿಕ್ಟ ಜಡ್ಜಿಗಳು, ಡೆಪ್ಯುಟಿ ಕಮ್ಮಿಷನರ್‌ಗಳು ಮತ್ತು ಎಗ್ಜಿಕ್ಯೂಟಿವ್ ಇಂಜನೀಯರ್‌ಗಳು ಅಥವಾ ರೆವಿನ್ಯೂ, ಜುಡಿಷಿಯಲ್ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಗಳಲ್ಲಿ ಇವರುಗಳಿಗೆ ಮೇಲ್ಪಟ್ಟ, ದರ್ಜೆವುಳ್ಳ ಆಫಿಸರರು ಅಥವಾ ಯಾವದಾದರೂ ಇತರ ಗೊತ್ತಾದ ಆಫಿಸರ್‌ಗಳು, ಇವರುಗಳ ವಿಷಯದಲ್ಲಿ, ವಂದು ಗಾಡಿ ಯರಡು ಕುದರೆಗಳು ಯಂದು ಅನ್ವಯಿಸತಕ್ಕದ್ದು.

(2) ಇತರರ ವಿಷಯದಲ್ಲಿ, ವಂದು ಸವಾರಿ ಕುದರೆಯಂದು ಅನ್ವಯಿಸತಕ್ಕದ್ದು.

ಷರಾ 1.—ಮಾಹೆಯಾನಾ ಸರ್ತಿಫ್ ಭತ್ಯವನ್ನು ಖಾಯಂ ಆಗಿ ಪಡಿಯುವ ಯಾವ ಆಫಿಸರುಗಳಿ ಈ ಸಬ್ ಆರ್ಟಿಕಲಿನ ಪ್ರಯೋಜನಗಳಿಗೆ ಅರ್ಹರಾಗಿರುವದಿಲ್ಲವು.

ಷರಾ 2.—ಈ ಸಬ್ ಆರ್ಟಿಕಲ್ ಅನುಸರಿಸಿ ಮೇಲ್ ದರ್ಜೆ ಆಫಿಸರರ ಮಂಜೂರಾತಿಯು 'ಸರ್ಕಾರದ ಕೆಲಸಗಳ ಅನುಕೂಲ್ಯತೆಗಳಿಗೋಸ್ಕರವೇ ಕೊಡಲ್ಪಡತಕ್ಕದ್ದು, ಹಾಂಗೆ ಕೊಟ್ಟುಗ ಕಾರಣಗಳ ಸಮೇತವಾಗಿ ಗವರ್ನಮೆಂಟಿಗೆ ಜನರಲ್ ಇಲಾಖೆಯಲ್ಲಿ ತಕ್ಷಣ ತಿಳಿಸಲ್ಪಡಬೇಕು."

II. 525 ಯೆ. ಆರ್ಟಿಕಲಿಗೆ ಬದಲಾಗಿ ಸೇರಿಸಲ್ಪಡಬೇಕಾದ್ದೇನಂದರೆ:—

"525 ಯೆ. ಕೌನ್ಸಿಲ್ಲಿನ ಪ್ರೊಬ್ಬ ಮೆಂಬರು ರೈಲ್ ಮಾರ್ಗವಾಗಿ ಸರ್ಕಾರ ಕೆಲಸದ ಮೇಲೆ ಪ್ರಯಾಣ ಮಾಡಿದಾಗ ಅಂಥಾ ರೈಲ್ವೆ ಪ್ರಯಾಣಕ್ಕೊಸ್ಕರ ಅವರಿಗೆ ಸಲ್ಲಬೇಕಾದ್ದೇನಂದರೆ,—

(1) ಅವರಿಗೋಸ್ಕರ ಫಸ್ಟ್‌ಕ್ಲಾಸ್ ಭಂಡಿಯು ವಂದು ಕಂವರ್ಟ್‌ಮೆಂಟ್;

(2) ಖಾಸ ನೌಕರರಿಗೋಸ್ಕರ ನಾಲ್ಕು ಥರ್ಡ್‌ಕ್ಲಾಸ್ ಚಾರ್ಜು; ಮತ್ತು

(3) ಖಾಸ ಸಾಮಾನಿಗೋಸ್ಕರ ಹತ್ತು ಮಣಕ್ಕೆ ವಿಾರದ ತೇದಾದಿಗೆ ರೈಲ್ವೆ ಚಾರ್ಜು."

III. ಆರ್ಟಿಕಲ್ 528ರಲ್ಲಿ ನವಮೂದಾದ ಯರಡನೇ ನಂಬರ್ ಅರ್ಪೆಡಿಕ್ಸಿನಲ್ಲಿ ಸೇರಿಸಲ್ಪಡಬೇಕಾದ್ದೇನಂದರೆ—"ಕೌನ್ಸಿಲ್ ಮೆಂಬರುಗಳಿಗೆ—ಭತ್ತ ಹತ್ತು ರೂಪಾಯಿ, ಮೈಲಿಭತ್ತ—ಮೈಲಿ ವಂದಕ್ಕೆ ಯಂಟಾಣೆ."

IV. ಆರ್ಟಿಕಲ್ 552ಕ್ಕೆ ಸೇರಿಸಲ್ಪಡಬೇಕಾದ್ದೇನಂದರೆ—"ಷರಾ—ಈ ಆರ್ಟಿಕಲ್ ಕೌನ್ಸಿಲಿನ ಮೆಂಬರುಗಳಿಗೆ ಅನ್ವಯಿಸತಕ್ಕದ್ದಲ್ಲವು."

ತಾರೀಖು 11ನೇ ಡಿಸೆಂಬರ್ 1895.

ನಂ. 5508.—ಎಕ್ಸೈಸ್. 182.—ಮೈಸೂರು ಗವರ್ನಮೆಂಟಿನವರು ಆಜ್ಞಾಪಿಸುವದೇನಂದರೆ, 1892ನೇ ಇಸವಿ ಮಾರ್ಚಿ 30ನೇ ಮಾರ್ಚ್ಯಂ 495ನೇ ನಂಬರ್ ಇಸ್ತಿಹಾರ್‌ನಾಮೆಯೊಡನೆ ಪ್ರಕಟಿಸಲ್ಪಟ್ಟ ರೂಲ್‌ಗಳ 21ನೇ ರೂಲಿನ 5ನೇ ಕ್ಲಾಜಿಗೆ ಕೀರಿದ (2) ವ (3)ನೇ ಸಬ್ ಕ್ಲಾಜ್‌ಗಳಿಗೆ ಬದಲಾಗಿ ಇದರಡಿ ಬರುವದನ್ನು ಸೇರಿಸತಕ್ಕದ್ದು.

(2) ಸದರೀ ಸ್ವಾತಂತ್ರ್ಯವನ್ನು ಖರೀದಿಗೆ ಪಡೆದುಕೊಂಡಂಥಾ ಮೊಬಲಗು ಸದರೀ ಕಾಂಟ್ರಾಕ್ಟಿನ ಮೊದಲನೇ ತಿಂಗಳಾರಭ್ಯ ಮಾಹೆಯಾನ ಸಮನಾದ ಖಿಸ್ತುಗಳಾಗಿ ಸ್ಥಳಿಕ ತಾಲ್ಲೂಕು ಟ್ರೆಜರೀಗೆ ವಿಧಿಸಲ್ಪಟ್ಟ ಅಚ್ಚಿನ ಚಲ್ತ ಮುಖಾಂತ್ರ ಪಾವತಿಮಾಡಲ್ಪಡಬೇಕು. ಪ್ರತಿ ಖಿಸ್ತು ಅದು ಪಾವತಿ ಮಾಡಲ್ಪಡಬೇಕಾದ ತಿಂಗಳಿನ ಇಜಾರೆ ಮೊಬಲಗೆಂದು ಭಾವಿಸಲ್ಪಡತಕ್ಕದ್ದು. ಪ್ರತಿ ಮಾಹೆಯ ಇಜಾರೆ ಮೊಬಲಗು ಸದರೀ ಮಾಹೆಯ 20ನೇ ತಾರೀಖಿನಲ್ಲಾಗಲಿ ತತ್ಪೂರ್ವವಾಗಲಿ ಪಾವತಿಮಾಡಲ್ಪಡಬೇಕು. ಹಾಂಗೆ ಪಾವತಿ ಮಾಡಲಿಕ್ಕೆ ತಪ್ಪಿದರೆ ಅಮಲ್ದಾರರು ಡೆಪ್ಯುಟಿ ಕಮ್ಮಿಷನರ ಹುಕುಂ ಪಡೆದು ಸದರೀ ಲೈಸೆನ್ಸು ದಂಡವಾಗಿ ಕಳದುಕೊಳ್ಳಲ್ಪಟ್ಟಿರುತ್ತೆಂದು ಬರಹಮೂಲಕವಾಗಿ ರಿಕಾರ್ಡು ಮಾಡಿ ಮಾಹೆ ಆಬ್ಯೆರ ಆದ ಕೂಡಲೆ ಸಾಧ್ಯವಾದಷ್ಟು ತ್ವರೆಯಲ್ಲಿ ಇಜಾರೆಯನ್ನು ಮರಳಿ ಹರಾಜು ಮಾಡತಕ್ಕದ್ದು. ಪರಂತು ಮೇಲ್ಕಂಡಂತೆ ಇಜಾರೆಯನ್ನು ಪುನಃ ವಿಕ್ರಯಿಸುವದಕ್ಕೆ ಬದಲಾಗಿ ಡೆಪ್ಯುಟಿ ಕಮ್ಮಿಷನರವರು ಅವರೆ ಯುಕ್ತಾನುಸಾರ ಹಾಂಗೆ ತಪ್ಪಿಹೋದ ಇಜಾರೆಯನ್ನು ಹಾಲಿ ಇರತಕ್ಕ ಅದಕ್ಕೆ ಕೀರಿದ ದುರ್ಕಾವಾರಾಗಿ ವಿಂಗಡಿಸಲ್ಪಟ್ಟ ಪ್ರತಿ ಬೇರೆಬೇರೆ ದುರ್ಕಾದಾರನಿಗೂ ಅವನು ಪಾವತಿ ಮಾಡುವದಕ್ಕೆ ತಪ್ಪುವ ಗುತ್ತಿಗೆ ಮೊಬಲಗಿಗೋಸ್ಕರ ಬಂದು ಲೈಸೆನ್ಸು ಕೊಡುವಂತೆ ಅಮಲ್ದಾರರಿಗೆ ಹುಕುಂ ಕೊಡಬಹುದು. ಪರಂತು ಹೀಂಗೆ ಕೊಡೋಣಾದ ಗುತ್ತಿಗೆಯ ವಬ್ಬ ಮೊಬಲಗು ತಪ್ಪಿಹೋದ ಇಜಾರೆದಾರನು ಪಾವತಿ ಮಾಡುವದಕ್ಕೆ ವಪ್ಪಿ ಇದ್ದ ಮೊಬಲಗಿಗಿಂತಲೂ ಕಮ್ಮಿ ಆಗಿರಕೂಡದು. ಚಲ್ತಗಳು ಇದಕ್ಕೆ ಲಗತ್ತು ಮಾಡಿರುವ ಈ ನಮೂನೆಯಲ್ಲಿ ಮೂರು ಪ್ರತಿಗಳಾಗಿರತಕ್ಕದ್ದು. ಇವರ ವರಿಜನಲ್ ಕಾಪಿಯು ಟ್ರೆಜರಿಯ ರೋಜೆನಾಮೆ ಲೆಖ್ತದೊಂದಿಗೆ ಡಿಸ್ಟ್ರಿಕ್ಟ ಟ್ರಜರೀಗೆ ಕಳುಹಿಸಲ್ಪಡತಕ್ಕದ್ದು. ಎರಡನೇ ಪ್ರತಿಯು ತಾಲ್ಲೂಕು ಟ್ರೆಜರಿ ಆಫಿಸರರಿಂದ ಎಕ್ಸೈಜ್ ಕಮ್ಮಿಷನರ ಆಫಿ

ನಿಗೆ ಕಳುಹಿಸಲ್ಪಡತಕ್ಕದ್ದು, ಮೂರನೇ ಪ್ರತಿಯು ಇಜಾರೆದಾರನ ಬಳಿ ಇಡಲ್ಪಡತಕ್ಕದ್ದು. ಸಿವಿಲ್ ವ ಮಿಲಿಟೆರಿ ಸ್ಟೇಷನಿನಲ್ಲಿರತಕ್ಕ ದುಕ್ಕಾಗಳಿಗೋಸ್ಕರ ಪಾವತಿ ಮಾಡಲ್ಪಡಬೇಕಾದ ಮೊಬಲಗು ಸದರೀ ಸಿವಿಲ್ ವ ಮಿಲಿಟೆರಿ ಸ್ಟೇಷನಿನ ಕಲೆಕ್ಟರಿಂದ ದುಕ್ಕಾದಾರರಿಗೆ ಕೊಡಲ್ಪಡುವ ಅಚ್ಚಿನ ಚೆಕ್ಕುಗಳ ಮುಖಾಂತರ ರೆಸಿಡೆಂಟರ ಟ್ರೆಜರಿಯಲ್ಲಿ ಪಾವತಿಮಾಡಲ್ಪಡಬೇಕು.

(3) ಲೈಸೆನ್ಸುದಾರನಿಂದ ಇಡಲ್ಪಟ್ಟ ಠೇವಣಿ ಮೊಬಲಗು ಇಜಾರೆ ವಾಯಿದೆಯ ಆಖೈರ್ ಎರಡು ತಿಂಗಳ ಖಿಸ್ತು ಮೊಬಲಗಿಗೋಸ್ಕರ ತೆಗದುಕೊಳ್ಳಲ್ಪಡುವದು. ಪರಂತು ಮೇಲ್ಕಂಡಂತೆ ಎರಡನೇ ಸಬ್ ಕ್ಲಾಜಿನ ನಿಯಮಗಳನುಸರಿಸಿ, ಇಜಾರೆಯು ದುಸರೇ ಹರಾಜ್ ಮಾಡಲ್ಪಟ್ಟ್ಯಾಗ ಅಥವಾ ವಿಂಗಡಿಸಲ್ಪಟ್ಟ್ಯಾಗ ಸದರೀ ಡಿಪಾಜಿಟ್ ಮೊಬಲಗು ಡೆಪ್ಯುಟಿ ಕಮ್ಮಿಷನರವರ ಯುಕ್ತಾನುಸಾರ ದಂಡವಾಗಿ ಆದರೂ ತೆಗದುಕೊಳ್ಳಲ್ಪಡಬಹುದು ಅಥವಾ ತಪ್ಪಿ ಹೋದವನಿಂದ ಬರಬೇಕಾದ ಬಾಕಿಗೋಸ್ಕರವೂ ಇಜಾರೆಯು ದುಸರೇ ಹರಾಜು ಮಾಡಿದ್ದರಿಂದ ಉಂಟಾಗಬಹುದಾದ ಯಾವ ನಷ್ಟವನ್ನಾದರೂ ಭರ್ತೀ ಮಾಡುವ ಬಗ್ಯೂ ಉಪಯೋಗಿಸಲ್ಪಡಬಹುದು. ಅಂಥಾ ಬರಬೇಕಾದ ಬಾಕಿಗಳು ಮತ್ತು ನಷ್ಟದ ಮೊಬಲಗುಗಳೂ ಸುದಾ ರೆವಿನ್ಯೂ ಕಂದಾಯದ ಬಾಕಿ ವಸೂಲಿ ಬಗ್ಯೆ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ ಶೇಕಡ ಸಾಲಿಯಾನ ಆರ್ಯಂತೆ ಆಗುವ ಬಡ್ಡಿ ದೇಖೀಲ್ ಲೈಸೆನ್ಸುದಾರನಿಂದ ವಸೂಲ್ ಮಾಡಲ್ಪಡತಕ್ಕದ್ದು. ಲೈಸೆನ್ಸುದಾರನಿಂದ ಯಾವ ಸಂದರ್ಭದಲ್ಲಿಯೂ ರಿಮಿಷರ್ಷ ಅಥವಾ ಇಜಾರೆ ಮೊಬಲಗನ್ನು ಕಮ್ಮಿ ಮಾಡುವ ಬಗ್ಯೆ ಅಥವಾ ಈಡು ಮೊಬಲಗು ಪಡೆಯುವ ಬಗ್ಯೆ ಕೇಳಲ್ಪಡಕೂಡದು.

2. ಕರಾರ್ ಮತ್ತು ಲೈಸೆನ್ಸ ವಗೈರೆಗಳ ಷರತ್ತುಗಳು ಬದಸ್ತೂರ ಬದಲಾಯಿಸಲ್ಪಡತಕ್ಕದ್ದು.

ನಂ. 5512.—ಎಕ್ಸ್.—183:—1893ನೇ ಇಸವಿ ಜನವರಿ 14ನೇ ಮಾರ್ಕಂ 11739—10—ರೆ. ಫೈ. 233—92ನೇ ನಂಬರಿ ಪ್ರೊಸಿಡಿಂಗ್ಸಿನಲ್ಲಿ ವಂಜರ್ಮಾಡಲ್ಪಟ್ಟ 11813—ರೆ. ಫೈ. 233—92ನೇ ನಂಬರ ಇಸ್ತಿಹಾರ್‌ನಾಮೆಯೊಡನೆ ಪ್ರಾಯಿಪ್ಮಾಡಲ್ಪಟ್ಟ ರೂಲ್ಸಗಳ Vನೇ ರೂಲಿನ 6ನೇ ಕ್ಲಾಜ್ (2) ನ (3)ನೇ ಸಬ್ ಕ್ಲಾಜ್‌ಗಳಿಗೆ ಇದರಡಿ ಬರುವದನ್ನು ಸೇರಿಸತಕ್ಕದ್ದೆಂದು ಮೈಸೂರು ಗವರ್ಮೆಂಟಿನವರು ಆಜ್ಞಾಪಿಸುತ್ತಾರೆ:—

(2) ಬಟ್ಟು ಸ್ವಾತಂತ್ರ್ಯವು ಖರೀದಿಗೆ ಪಡೆದುಕೊಂಡಂಥಾ ಮೊಬಲಗು ಖಿಸ್ತು ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಆಗುವ ಲೋಕಲ್ ಸೆಸ್ ದೇಖೀಲ್, ಲೈಸೆನ್ಸುದಾರನಿಂದ ಸ್ಥಳಿಕ ಫಜೂನೆಗೆ ಆ ಬಗ್ಯಾಗಿ ಗವರ್ಮೆಂಟಿನಿಂದ ಒದಗಿಸಲ್ಪಡುವ ವಿಧಿಸೋಣಾದ ಅಚ್ಚಿನ ಚಲ್ತ ಮೇಲೆ, ಗುತ್ತಿಗೆಯ ಮೊದಲನೇ ತಿಂಗಳಿನಾರಭ್ಯ ಸಮನಾದ ಮಾಹೆವಾರಿ ಖಿಸ್ತುಗಳಾಗಿ ಪಾವತಿ ಮಾಡಲ್ಪಡತಕ್ಕದ್ದು. ಪ್ರತಿ ಖಿಸ್ತು ಮೊಬಲಗೂ ಅದು ಪಾವತಿ ಮಾಡಲ್ಪಡಬೇಕಾದ ತಿಂಗಳಿನ ಗುತ್ತಿಗೆ ಮೊಬಲಗೆಂದು ಭಾವಿಸಲ್ಪಡತಕ್ಕದ್ದು. ಪ್ರತಿ ಮಾಹೆಯ ಗುತ್ತಿಗೆ ಮೊಬಲಗು ಆದರ ಮೇಲಿನ ಲೋಕಲ್ ಸೆಸ್ ದೇಖೀಲ್ ಅದೇ ಮಾಹೆಯ 20ನೇ ತಾರೀಖಿನಲ್ಲಾಗಲಿ ತತ್ಪೂರ್ವವಾಗಲಿ ಪಾವತಿಮಾಡಲ್ಪಡಬೇಕು. ಹಾಂಗೆ ಪಾವತಿ ಆಗುವದಕ್ಕೆ ತಪ್ಪಿದರೆ, ಸದರೀ ಅಮಲ್ದಾರರು, ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿಯನ್ನು ಪಡೆದು, ಸದರೀ ಗುತ್ತಿಗೆಯು ರದ್ದಾಗಿರುತ್ತೆಂದು ಬರಹ ಮೂಲಕ ರೆಕಾರ್ಡು ಮಾಡಿ, ಸದರೀ ಮಾಹೆ ಆಖೈರಾದ ಕೂಡಲೆ ಸಾಧ್ಯವಾದಷ್ಟು ತ್ವರೆಯಲ್ಲಿ, ಇಜಾರೆಯನ್ನು ಮರಳಿ ಹರಾಜ್ ಮಾಡುವದಕ್ಕೆ ಉದ್ಯುಕ್ತರಾಗತಕ್ಕದ್ದು. ಪರಂತು ಸದರೀ ಇಜಾರೆಯನ್ನು ಮೇಲ್ಕಂಡಂತೆ ದುಸರೇ ಹರಾಜು ಮಾಡುವದಕ್ಕೆ ಬಲಾಗಿ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯುಕ್ತಾನುಸಾರ ಅಂಥಾ ರದ್ದಾದ ಇಜಾರೆಗೆ ಶೇರಿರತಕ್ಕ ದುಕಾನುಗಳನ್ನು ಪುನಃ ವಿಂಗಡಿಸಿ ಪ್ರತಿ ದುಕ್ಕಾದಾರನಿಗೂ ಆವನು ಕೊಡುವದಕ್ಕೆ ವಪ್ಪುವಂಥಾ ಗುತ್ತಿಗೆ ಮೊಬಲಗ್ಯೆ ಬೇರೆ ಬೇರೆ ಲೈಸೆನ್ಸು ಕೊಡುವಂತೆ ಹುಕುಂ ಮಾಡಬಹುದು; ಪರಂತು ಆಂಥಾ ಗುತ್ತಿಗೆಯ ಬಟ್ಟು ಮೊಬಲಗು, ತಪ್ಪಿಹೋದ ಕಂಟ್ರಾಕ್ಟುದಾರನು ಪಾವತಿ ಮಾಡುವದಾಗಿ ಒಪ್ಪಿ ಇದ್ದದ್ದಕ್ಕಿಂತಲೂ ಕಮ್ಮಿಯಾಗಿರಕೂಡದು. ಚಲ್ತಗಳು ಲಗತ್ತಿರುವ ಸಿ. ನಮೂನೆಯಲ್ಲಿ ತ್ರಿಪ್ರತಿಗಳಾಗಿ ಇರತಕ್ಕದ್ದು. ಇದರ ವರಿಜನಲ್ ಭಾಗವು ಟ್ರೆಜರಿ ‘‘ರೋಜ್ ಕ್ಯಾಷ್’’ ಲೆಕ್ಕದೊಂದಿಗೆ ಡಿಸ್ಟ್ರಿಕ್ಟ್ ಟ್ರೆಜರಿಗೆ ರವಾನಿಸಲ್ಪಡತಕ್ಕದ್ದು. ಎರಡನೇ ಭಾಗವು ತಾಲ್ಲೂಕು ಟ್ರೆಜರಿ ಆಫಿಸರಿಂದ ಡೆಪ್ಯುಟಿ ಕಮ್ಮಿಷನರವರ ಆಫಿಸಿಗೆ ಕಳುಹಿಸಲ್ಪಡತಕ್ಕದ್ದು. ಮತ್ತು ಮೂರನೇ ಭಾಗವು ಲೈಸೆನ್ಸುದಾರನಲ್ಲಿ ಇಡಲ್ಪಡತಕ್ಕದ್ದು.

(3) ಲೈಸೆನ್ಸುದಾರನಿಂದ ಹೂಜರಾಫಲ್ಪಟ್ಟ ಠೇವಣಿ ಮೊಬಲಗು, ಗುತ್ತಿಗೆ ವಾಯಿದೆಯ ಆಖೈರ್ ಮಾಹೆ ಯಾ ಮಾಹೆಗಳ ಖಿಸ್ತುಗಳಿಗೋಸ್ಕರ ವಸೂಲ್ ಹಾಕಲ್ಪಡಬೇಕು. ಪರಂತು ಮೇಲ್ಕಂಡ (2)ನೇ ಸಬ್ ಕ್ಲಾಜ್ ಅನುಸರಿಸಿ, ಇಜಾರೆಯು ದುಸರೇ ಹರಾಜ್ ಮಾಡಲ್ಪಟ್ಟ್ಯಾಗ ಯಾ ರದ್ದು ಮಾಡಲ್ಪಟ್ಟ್ಯಾಗ, ಡಿಪಾಜಿಟ್ ಮೊಬಲಗು ಡೆಪ್ಯುಟಿ ಕಮ್ಮಿಷನರವರ ಯುಕ್ತಾನುಸಾರ ದಂಡವಾಗಿ ತೆಗದುಕೊಳ್ಳಲ್ಪಡಬಹುದು ಅಥವಾ ತಪ್ಪಿ ಹೋದ ಇಜಾರೆದಾರನಿಂದ ಬರಬೇಕಾದ ಬಾಕಿಗೂ ಮತ್ತು ಇಜಾರೆಯು ಮರಳಿ ಹರಾಜ್ ಮಾಡಲ್ಪಟ್ಟದ್ದರಿಂದ ಉಂಟಾಗಬಹುದಾದ ಯಾವದಾದರೂ ನಷ್ಟದ ಮೊಬಲಗಿಗೂ ಸುದಾ ಉಪಯೋಗಿಸಲ್ಪಡಬಹುದು. ಹಾಂಗೆ ಬರಬೇಕಾದ್ದ ಬಾಕಿ ಮೊಬಲಗು ವ ನಷ್ಟದ ಮೊಬಲಗು ಸುದಾ ಲೈಸೆನ್ಸುದಾರನಿಂದಾಗಲಿ ಅವನ ಜಾಮೀನ್‌ದಾರ್ ಯಾ ಜಾಮೀನ್‌ದಾರರಿಂದಲಾಗಲಿ ಯಾ ಮೊದಲಯತ್ರರಿಂದಾಗಲಿ, ರೆವಿನ್ಯೂ ಕಂದಾಯದ ಬಾಕಿ ವಸೂಲಿ ಬಗ್ಯಾಗಿ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ, ಶೇಕಡಾ ಸಾಲಿಯಾನಾ 6ರ ಪ್ರಕಾರ ಆಗುವ ಬಡ್ಡಿ ದೇಖೀಲ್ ವಸೂಲ್ ಮಾಡಲ್ಪಡತಕ್ಕದ್ದು. ಲೈಸೆನ್ಸುದಾರನಿಂದ ಯಾವ ಸಬಬಿನ ಮೇಲಾಗಲಿ, ಗುತ್ತಿಗೆ ಮೊಬಲಗಿನ ಯಾವ ರಿಮಿಷರ್ಷ ಅಥವಾ ಕಮ್ಮಿ ಮಾಡುವಣಿಯಾಗಲಿ ಅಥವಾ ಈಡು ಮೊಬಲಗಾಗಲಿ ಕೇಳಲ್ಪಡಕೂಡದು.

2. ಒಡಂಬಡಿಕೆ, ಲೈಸೆನ್ಸ ವಗೈರೆಗಳ ಷರತ್ತುಗಳು ಬದಸ್ತೂರ ಬದಲಾಯಿಸಲ್ಪಡತಕ್ಕದ್ದು, ಮತ್ತು ತೆಗದುಕೊಳ್ಳಬೇಕಾದ ಜಾಮೀನೀ ವಿಷಯದಲ್ಲಿ, 1895ನೇ ಇಸವಿ ಮಾರ್ಚಿ 29ನೇ ಮಾರ್ಕಂ 15931—ರೆ. ಫೈ. 210—92ನೇ ನಂಬರ ಇಸ್ತಿಹಾರ್‌ನಾ

ಮೆಯಿ 3ನೇ ಪ್ಯಾರಾದಲ್ಲಿ ಅಡಗಿರುವದಕ್ಕೆ ಬದಲಾಗಿ 1893ನೇ ಇಸವಿ ಜನವರಿ 14ನೇ ಮುಕ್ತಂ 11813—ರೆ. ಫೈ. 233–92ನೇ ನಂಬರ್ ಇಸ್ತಿಹಾರ್‌ನಾಮೆಯ Vನೇ ರೂಲ್ 2ನೇ ಕ್ಯಾಜಿನಲ್ಲಿ ವಿಧಿಸೋಣಾದ ಪರತ್ತುಗಳು, ಆಚರಿಸಲ್ಪಡತಕ್ಕದ್ದು.

ತಾರೀಖು 14ನೇ ಡಿಸೆಂಬರ್ 1895.

ತಪ್ಪು ತಿದ್ದುವಿಕೆ.

ನಂ. 5584.—ಫಾ. ಫೈ. 36—95, 1895ನೇ ಇಸವಿ ಜೂ 19ನೇ ಮುಕ್ತಂ 23538—ರೆ. 3437ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯೊಡನೆ ಫಾಯಿಷ್‌ಮಾಡಲ್ಪಟ್ಟು ಮೈಸೂರು ಗೆಜೆಟ್ಟಿನ 394ನೇ ಪುಟದಲ್ಲಿ ಛಾಪಿಸಲ್ಪಟ್ಟ ವುಂಬಳಿ ಬೈಲ್ ಸ್ಟೇಟ್ ಫಾರೆಸ್ಟಿಗೆ ಕೇರಿದ 17ನೇ ನಂಬರ್ ಚೌರನಾಯಡಹಳ್ಳಿ ಬ್ಲಾಕಿನ ಚಕ್ಕತ್ತು ಬಂದಿಗೆ ಬದಲಾಗಿ ಇದರಡಿ ಬರುವದನ್ನು ಕೇರಿಸ ತಕ್ಕದ್ದು:—

"ಉತ್ತರಕ್ಕೆ.—ತುಂಗಾನದಿಯು ಬಂದು ಪಾಪೆಯಾದ ಯಳೆಸಲು ಬಳಿಯಣ ಹಾಲ್‌ಲಕ್ಕುವಳ್ಳಿಯ 18ನೇ ಸರ್ವೇ ನಂಬರಿನಿಂದ ಬಂದು ಸಾಫ್ ಮಾಡಿದ ಲೈನು ಹೊರಟು ತಿವವೊಗ್ಗ ಯಡೆಹಳ್ಳಿ ರಸ್ತೆಯ 7ನೇ ಮೈಲಿ 5ನೇ ಫರ್‌ಲಾಂಗ್ ವರಿಗೆ ಹೋಗುತ್ತದೆ.

"ಪೂರ್ವಕ್ಕೆ.—ಮೇಲಿನ ಪಾಯಂಟಿನಿಂದ ಸದರೀ ಲೈನ್ ತಿವವೊಗ್ಗ ಯಡೆಹಳ್ಳಿ ಮಾರ್ಗವಾಗಿ ಹೊರಟು 10ನೇ ಮೈಲಿ 5ನೇ ಫರ್‌ಲಾಂಗ್ ವರಿಗೆ ಹೋಗುತ್ತದೆ.

"ದಕ್ಷಿಣಕ್ಕೆ.—ಬಂದು ಸಾಫ್ ಮಾಡಿದ ಲೈನ್ ತಿವವೊಗ್ಗ ಯಡೆಹಳ್ಳಿ ರಸ್ತೆಯ 10ನೇ ಮೈಲಿ 5ನೇ ಫರ್‌ಲಾಂಗಿನಿಂದ ಹೊರಟು ಸಮುದ್ರಹಳ್ಳಿಯ 59ನೇ ಸರ್ವೇ ನಂಬರಿವರಿಗೆ ಹೋಗುತ್ತದೆ.

"ಪಶ್ಚಿಮಕ್ಕೆ.—ಸದರೀ 59ನೇ ಸರ್ವೇ ನಂಬರಿನಿಂದ ಲೈನ್ ಹೊರಟು ಪುರುವಾದ ಸ್ಥಳಕ್ಕೆ ಬಂದು ಸೇರುತ್ತದೆ."

ತಾರೀಖು 23ನೇ ಡಿಸೆಂಬರ್ 1895.

ನಂ. 5817.—ಫಾ. ಫೈ. 54—95.—1889ನೇ ಇಸವಿ ಆಗಸ್ಟ್ 7ನೇ ಮುಕ್ತಂ 113ನೇ ನಂಬರ್ ಮತ್ತು 1894ನೇ ಇಸವಿ ಮೇ 5ನೇ ಮುಕ್ತಂ 19171.—ರೆ. ಫೈ. 303—92ನೇ ನಂಬರ್ ಇಸ್ತಿಹಾರ್‌ನಾಮೆಗಳನುಸರಿಸಿ, ಇದರಿಂದ ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಪಡಿಸುವದೇನಂದರೆ, ಕಡೂರು ಡಿಸ್ಟ್ರಿಕ್ಟಿನ ಇದರಡಿ ಕಂಡ ಡಿಪೋಗಳಲ್ಲಿ ತೇಗದ ಮರವು ಅಯಾಯ ಡಿಪೋಗಳಿಗೆ ಬಾಜಾದಲ್ಲಿ ಕಾಣಿಸಿ ಇರುವ ತಿದ್ದುಪಾಟಾದ ದರಗಳ ಪ್ರಕಾರ ಬಿಕರಿ ಮಾಡಲ್ಪಡುವದು:—

ಡಿಪೋ ಹೆಸರು.	ಮರದ ವಿವರಣೆ.	ಅವ್ವಲ್ ರಖಮಿಗೆ ದರ.	ದುಯ್ಯಂ ರಖಮಿಗೆ ದರ.	ತಿಯ್ಯಂ ರಖಮಿಗೆ ದರ.	ಚಹರಂ ರಖಮಿಗೆ ದರ.
		ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.
ಕಡೂರು ಡಿಪೋ	ತೇಗದಮರ	1—14—0	1—10—0	1—6—0	1—4— 0
ತರೀಕೆರೆ ಡಿಪೋ	ಡಿಟೋ	1—12—0	1— 8—0	1—4—0	0—0— 0
ಲಕ್ಕುವಳ್ಳಿ ಡಿಪೋ	ಡಿಟೋ	1—10—0	1— 6—0	1—2—0	0—0— 0

ತಾರೀಖು 6ನೇ ಜನವರಿ 1896.

ನಂ. 5838.—ರೆ. 2275.—ಮೈಸೂರು ಸರ್ವಿಸ್ ರೆಗ್ಯುಲೇಷ್ಯಗಳ 221ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಡಿಸ್ಟ್ರಿಕ್ಟ್ ಪ್ರೊಬೇಷನರಿ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ಸ್ ಸಿ. ದೇವರಾಜ ಅರಸಿನವರಿಗೆ, 1895ನೇ ಇಸವಿ ನವಂಬರ್ 28ನೇ ಮುಕ್ತಂ ಲಾಗಾಯತು ಬಗರ್ ತಲಬ್ ಒಂದು ತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

ನಂ. 5854.—ರೆ. 2285.—1888ನೇ ಇಸವಿ IVನೇ ನಂಬರ್ ರೆಗ್ಯುಲೇಷ್ಯ ಆದ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷ್ಯ 2ನೇ ಪ್ಯಾರಾ ಅನುಸರಿಸಿ, ಮೈಸೂರು ಗವರ್ನಮೆಂಟಿನವರು ಆಜ್ಞಾಪಿಸುವದೇನಂದರೆ, ಸದರೀ ಕೋಡಿನ VIII ಮತ್ತು IXನೇ ಅಧ್ಯಾಯಗಳ ನಿಯ್ಯಮಗಳು ಮಂಡ್ಯ ತಾಲ್ಲೂಕಿನ ಕಾಯಂಗುತ್ತಾ ಅಂಕುಶಾಪುರ ಗ್ರಾಮಕ್ಕೆ ಲಗಾವ್ ಮಾಡಲ್ಪಡತಕ್ಕದ್ದು.

ನಂ. 5871.—ರೆ. 2294.—ಮೈಸೂರು ಸರ್ವಿಸ್ ರೆಗ್ಯುಲೇಷ್ಯಗಳ 188ನೇ ಆರ್ಟಿಕಲ್ ಅನುಸರಿಸಿ, ಚಳ್ಳಕೆರೆ ಅಮಲ್ದಾರ್ ಜೆ. ಶ್ರೀನಿವಾಸರಾಯರಿಗೆ, 1895ನೇ ಇಸವಿ ಅಕ್ಟೋಬರ್ 25ನೇ ಮುಕ್ತಂ 4060—ರೆ. 1566ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ಎರಡು ತಿಂಗಳೂ ಏಳು ದಿವಸಗಳ ಪ್ರಿವಿಲೀಜ್ ರಜಾ 1896ನೇ ಇಸವಿ ಜನವರಿ 27ನೇ ತಾರೀಖು ಪರಿಯಂತ ಜಾಸ್ತೀ ಮಾಡಲ್ಪಟ್ಟಿರುತ್ತೆ.

ನಂ. 5918.—ಫೈ. 349.—ಗವರ್ನಮೆಂಟಿನವರು, 1891ನೇ ಇಸವಿ ಆಕ್ಟೋಬರ್ 27ನೇ ಮುಕ್ತಂ 305ನೇ ನಂಬರ್ ಇಸ್ತಿಹಾರ್‌ನಾಮೆಯೊಡನೆ ಫಾಯಿಷ್ಮಾಡಲ್ಪಟ್ಟ ಮೈಸೂರು ಸ್ಟೇಟ್ ಲೈಫ್ ಇನ್ಸ್ಯೂರೆನ್ಸ್ ರೂಲ್ಸಿನ 21ನೇ ರೂಲಿಗೆ ಬದಲಾಗಿ ಇದರಡಿ ಬರುವದನ್ನು ಕೇರಿಸತಕ್ಕದ್ದೆಂದು ಆಜ್ಞಾಪಿಸುತ್ತಾರೆ:—

21 "ಸೆಕ್ರಟೆರಿಯವರು, ಪಾಲಸಿ ಪತ್ರವನ್ನು ಭೀಮಾದಾರನಿಗೆ ಮೊದಲನೇ ಪ್ರೀಮಿಯಂಯಾನೆ ಚಂದಾ ಪಾವತಿ ಮಾಡಿದ ತರುವಾಯ ಕೊಡುವ ಬಗ್ಯಾಗಿ ಸದರೀ ಭೀಮಾದಾರನು ವಾಸವಾಗಿರುವಂಥಾ ಡಿಸ್ಟ್ರಿಕ್ಟಿನ ಟ್ರೆಜರಿ ಆಫಿಸರ ಬಳಿಗೆ ಕಳುಹಿಸತಕ್ಕದ್ದು.

ಮೊದಲನೇ ಚಂದಾ ನೊಬಲಗು ಪಾವತಿ ಮಾಡಿದ ತಾರೀಖು ಭೀಮಾ ಪತ್ರದ ತಾರೀಖಾಗಿ ಇರತಕ್ಕದ್ದು ಮತ್ತು ಭೀಮಾ ಪತ್ರವನ್ನು ಕೊಡುವದಕ್ಕೆ ಮುಂಚಿತವಾಗಿ ಸದರೀ ತಾರೀಖು ಭೀಮಾ ಪತ್ರವಲ್ಲಿ ಟ್ರೆಜರಿ ಆಫಿಸರಂದ ಸಮೂದಿಸಲ್ಪಡತಕ್ಕದ್ದು. ಬಂದು ಭೀಮಾ ಪತ್ರವು ಡಿಸ್ಟ್ರಿಕ್ಟು ಟ್ರೆಜರಿಯಿಂದಲಾಗಲಿ ಅಥವಾ ಅದು ಪಾವತಿ ಬಗ್ಯೆ ಕಳುಹಿಸಲ್ಪಟ್ಟಿರಬಹುದ್ದಾದಂಥಾ ತಾಲ್ಲೂಕು ಟ್ರೆಜರಿಯಿಂದಲಾಗಲಿ ಆದು ತಲಪಿದ ತಾರೀಖು ಲಾಗಾಯತು ಬಂದು ತಿಂಗಳ ವಳಗಾಗಿ ತೆಗದುಕೊಳ್ಳಲ್ಪಡದಿದ್ದರೆ ಆ ಸಂಗತಿಯು ಸೆಕ್ರಟರಿಯವರಿಗೆ ರಿಪೋರ್ಟು ಮಾಡಲ್ಪಡತಕ್ಕದ್ದು; ಅವರು ವರಿಜನರಿ ಮೆಡಿಕಲ್ ಸರ್ಟಿಫಿಕೇಟು ಹಾಜರ್ಮಾಡಲ್ಪಟ್ಟ ಕಾಲದಿಂದ ಆರು ತಿಂಗಳ ವಳಗಾಗಿ ಇದ್ದಪಕ್ಷದಲ್ಲಿ ಬಂದು ಸಾಧಾರಣ ಮೆಡಿಕಲ್ ಸರ್ಟಿಫಿಕೇಟ್ ಹಾಜರ್ಮಾಡುವಂತೆ ಭೀಮಾದಾರನಿಗೆ ಯೆಚ್ಚರಿಸತಕ್ಕದ್ದು.

ತಾರೀಖು 7ನೇ ಜನವರಿ 1896.

ನಂ. 5821.—ಫಾ. ಫೈ.—93—95.—ಫಾರೆಸ್ಟ್ ಡೆಪ್ಯುಟಿ ಕರ್ಣಸರ್ವೇಟರ್ ಮೆಸ್ಸರ್ ಸಿ. ಇ. ಯಂ. ರಸಲ್‌ಯವರು ಒಂದು ವರುಷದ ಪರಿಯಂತ ಬಗರ್ ತಲಬ್ ವಿಶೇಷ ರಜಾ ಕೊಡಲ್ಪಟ್ಟಿರುವದರಿಂದ; ಮೈಸೂರ ಡಿಸ್ಟ್ರಿಕ್ಟಿನ ಫಾರೆಸ್ಟ್ ಅಸಿಸ್ಟೆಂಟ್ ಕರ್ಣಸರ್ವೇಟರ್ ಮೆಸ್ಸರ್ ಬಿ. ಹಿಗಾಶಿಂಗ್‌ಯವರು, ಮೆಸ್ಸರ್ ರಸಲ್‌ಯವರು ರಜಾದಮೇಲೆ ಇರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರಾಗಿ ಕೆಲಸ ನೋಡುವ ಬಗ್ಯೆ ಕಡೂರು ಡಿಸ್ಟ್ರಿಕ್ಟಿಗೆ ವರ್ಗಮಾಡಲ್ಪಟ್ಟಿರುತ್ತಾರೆ.

ತಾರೀಖು 9ನೇ ಜನವರಿ 1896.

ನಂ. 5945.—ರೆ. 2317.—ಹೊಳೇನರಸೀಪುರ ತಾಲ್ಲೂಕು ಅಮಲ್ದಾರ್ ಪಿ. ಸುಬ್ಬರಾಯಶಾಸ್ತ್ರಿಯವರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ, 1896ನೇ ಇಸವಿ ಜನವರಿ 1ನೇ ಮಾರ್ಚ್ಂ ಲಾಗಾಯತು ಯಾ ಆವರಿ ಉಪಯೋಗಿಸಿಕೊಂಡ ತಾರೀಖು ಮೊದಲು ಎರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

2. ಸುಬ್ಬರಾಯಶಾಸ್ತ್ರಿಯವರು ರಜಾದಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಡೆಪ್ಯುಟಿ ಕಮಿಷನರವರ ಆಫಿಸ್ ಜುಡಿಷಲ್ ಹೆಡ್‌ಮುನಷಿ ಎಸ್. ಕೃಷ್ಣಪ್ಪನವರಿಗೆ ಹೊಳೇ ನರಸೀಪುರ ತಾಲ್ಲೂಕಿನ ಅಮಲ್ದಾರರ ವ 3ನೇ ಕ್ಲಾಸಿ ಮಾಜಿಸ್ಟ್ರೇಟರಾಗಿ ಆಪ್ಟಿಂಗ್ ತರೀಕ್ ಮೊಕರರ್ಮಾಡಲ್ಪಟ್ಟಿರುತ್ತೆ.

ತಾರೀಖು 10ನೇ ಜನವರಿ 1896.

ನಂ. 6003.—ಫಾ. ಫೈ.—93-95.—ಷಿಕಾರಿಪುರದ ಸಬ್ ಡಿವಿಜ್ ಫಾರೆಸ್ಟ್ ಅಸಿಸ್ಟೆಂಟ್ ಕರ್ಣಸರ್ವೇಟರಾದ ಮೆಸ್ಸರ್ ಬಿ. ಶ್ರೀನಿವಾಸರಾಯರು, ಮೆಸ್ಸರ್ ಹಿಗೋಸಿಂಗ್‌ಯವರಿಗೆ ಛಾರ್ಜು ಒಪ್ಪಿಸುವ ತನಕ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತರ ಕಡೂರು ಡಿಸ್ಟ್ರಿಕ್ಟು ಫಾರೆಸ್ಟು ಛಾರ್ಜನ್ನು ಹಂಗಾಮಿತರೀಕು ವಹಿಸಿರತಕ್ಕದ್ದು.

2. ಫಾರೆಸ್ಟು ಆಫೀಸ್ಟಂಟ್ ಅಸಿಸ್ಟೆಂಟ್ ಕರ್ಣಸರ್ವೇಟರಾದ ಮೆಸ್ಸರ್ ಮಾಂಟೀರಿಯೋ ಯವರು, ಕಡೂರನಲ್ಲಿ ಮೆಸ್ಸರ್ ಶ್ರೀನಿವಾಸರಾಯರು ಇರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತರ ಷಿಕಾರಿಪುರದ ಸಬ್ ಡಿವಿಜನ್ನಿನ ಛಾರ್ಜನ್ನು ಹಂಗಾಮಿ ತರೀಕ್ ವಹಿಸಿ ಇರತಕ್ಕದ್ದು.

ಹುಕುಂ ಬಮೋಜೆಬ್,
ಸಿ. ಶ್ರೀನಿವಾಸಯ್ಯಂಗಾರ್,
ರೆವಿನ್ಯೂ ಸೆಕ್ರಟರಿ.

ಜನರಲ್.

ತಾರೀಖು 7ನೇ ಜನವರಿ 1896.

ನಂ. 7570.—ಮಿ. 1096.—ಫೆಬ್ರವರಿ ಗುರ್ಯೇ ತಾರೀಖು, ಮೈಸೂರು ಶ್ರೀಮತ್ ಮಹಾರಾಜರವರು ಪಟ್ಟಾಭಿಷಿಕ್ತರಾದ ಶುಭದಿನವಾದುದರಿಂದ ಆ ದಿನವು ಸಂಸ್ಥಾನಾವುಳಿ ವಟ್ಟು ರಜಾ ದಿವಸವೆಂದು ಆಚರಿಸಲ್ಪಡತಕ್ಕದ್ದು.

ತಾರೀಖು 8ನೇ ಜನವರಿ 1896.

ನಂ. 7590.—ಲೋ. ಫಂ. 21—92.—ಮೆಸರ್ಸು ಭೀಮರಾವ್ ಮತ್ತು ಚನ್ನಪ್ಪನವರು ನ್ಯಾಂತಿ ಮ್ಯುನಿಸಿಪಾಲಿಟಿಯ ಜಾಸ್ತೀ ಮೆಂಬರುಗಳಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ನಂ. 7629.—ಜು. 844.—ಬೆಂಗಳೂರು ಡಿಸ್ಟ್ರಿಕ್ಟು ಪೊಲೀಸ್ ಸೂಪರ್‌ಟೆಂಡೆಂಟರಾದ ಮೆಸ್ಸರ್ ಡಿ. ದೇವರಾಜೇ ಅರಸನವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸಾರ, 1895ನೇ ಇಸವಿ ಡಿಸೆಂಬರ್ 16ನೇ ಮಾರ್ಚ್ಂ ಲಾಗಾಯತು ಐದು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 7631.—ಜು. 846.—ತುಮಕೂರು ಡಿಸ್ಟ್ರಿಕ್ಟು ಪೊಲೀಸ್ ಅಸಿಸ್ಟೆಂಟ್ ಸೂಪರ್‌ಟೆಂಡೆಂಟ್ ಮೆಸ್ಸರ್ ಪಿ. ಎಫ್. ಬವರಿಂಗ್‌ಯವರಿಗೆ ಕೊಡಲ್ಪಟ್ಟ ಹತ್ತು ದಿವಸಗಳ ಕ್ಯಾಜುಯಲ್ ರಜಾ ಇದರ ದೆಸೆಯಿಂದ ಇನ್ನೂ ಒಂದು ವಾರದ ಪರಿಯಂತ ಜಾಸ್ತಿ ಮಾಡಲ್ಪಟ್ಟು ಸದರೀ ಹದಿನೇಳು ದಿವಸಗಳ ಪೂರಾ ರಜಾ ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ, ಪ್ರಿವಿಲೀಜ್ ರಜುವಾಗಿ ಬದಲಾಯಿಸಲ್ಪಟ್ಟಿರುತ್ತೆ.

ನಂ. 7644.—ಜು. 854.—ಇದರಡಿ ಕಂಡ ಮುನಿಸಿಫರ್‌ಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತೆ:—

ಮುನಿಸಿಫರ ಹೆಸರು	ಯಿಂದಾ	ಗೆ
ಮೆಸ್ಸರ್ ಬಸವಾರಾಧ್ಯಾಯವರು	ಮದ್ದಗಿರಿ	ಸಾಗರ
ಮೆಸ್ಸರ್ ನರಸಿಂಗರಾಯರು	ಸಾಗರ	ಮದ್ದಗಿರಿ